**1069 ಶ್ರೀ ಶಂಕರಪಾಟೀಲ ಮುನೇನಕೊಪ್ಪ :** ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ಬೀಡಿ–ಬೆಳವಟಗಿ (ಶಿರೂರ ಗ್ರಾಮದಿಂದ)ಯಿಂದ ಗೊಬ್ಬರಗುಪ್ಪಿ ಕ್ರಾಸ್‌ದವರೆಗೆ ರಸ್ತೆಯು ತೀರಾ ಹದಗೆಟ್ಟಿದ್ದು, ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಯ ಕಿ.ಮೀ 48.830ರಿಂದ 83.120ರವರೆಗೆ ಒಟ್ಟು 34.20 ಕಿ.ಮೀ ಇದ್ದು, ತುಂಬಾ ಹಾಳಾಗಿರುವುದರಿಂದ ತಕ್ಷಣವೇ ಅಭಿವೃದ್ಧಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

ಇ) ಈ ರಸ್ತೆಗೆ ಅಭಿವೃದ್ಧಿಗೆ ತಗಲುವ ಅಂದಾಜು ವೆಚ್ಚವೆಷ್ಟು;

ಈ) ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

**ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :**

ಅ) ಆ) ಇ) ಮತ್ತು ಈ)

ಈ ರಸ್ತೆಯು ಭಾಗಶಃ ಹಾಳಾಗಿದ್ದು, ರಸ್ತೆಯ ಪೂರ್ಣ ಪ್ರಮಾಣದ ಅಭಿವೃದ್ಧಿಗೆ ಸುಮಾರು ರೂ.410.00 ಲಕ್ಷಗಳ ಅನುದಾನದ ಅಗತ್ಯವಿದೆ.

ಈ ರಸ್ತೆಯ ಅಭಿವೃದ್ಧಿಯನ್ನು 2009–10ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಕೈಗೆತ್ತಿ ಕೊಳ್ಳಲಾಗುವುದು.

**1069 Sri Shankara Patila Munenakoppa :** Hon'ble Minister for Public Works kindly answer to the below question?

a) Whether deterioration of road from Beedi-Belavatagi(from Shiroor village) to Gobbaraguppi cross causing inconvenience for traffic has come to the notice of the Government;

b) This road from km 48.830 to 83.120 being totally 34.20 km long, having been severely damaged, what are the actions taken by the Government for its development immediately;

c) What is the estimated expenditure for development of this road;

d) when this work will be commence?

**Sri C.M.UDASI (Minister for Public Works) :**

a) b) c) and d)

This road has been partially damaged, about Rs.410.00 lakhs of funds are required for total development of this road.

The development of this road will be undertaken during the year 2009-10 depending upon the availability of funds.

**1070 ಶ್ರೀ ಶಂಕರಪಾಟೀಲ ಮುನೇನಕೊಪ್ಪ** : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ ಸಂಖ್ಯೆ 136ರ 75.350 ಕಿ.ಮೀ ದಿಂದ 79.600 ಕಿ.ಮೀರವರೆಗೆ ಒಟ್ಟು 4.250 ಕಿ.ಮೀ ರಸ್ತೆಯು ಹಾಳಾಗಿದ್ದು, ಇದನ್ನು ಅಭಿವೃದ್ಧಿಪಡಿಸಲು ಸರ್ಕಾರವು ತೆಗದುಕೊಂಡಿರುವ ಕ್ರಮಗಳೇನು;

ಆ) ಈ ರಸ್ತೆಯು ಹಾಳಾಗಿದ್ದು, ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸ ಲಾಗುವುದು?

**ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು)** :

ಅ) ಮತ್ತು ಆ) ನವಲಗುಂದ ತಾಲ್ಲೂಕಿನ ವ್ಯಾಪ್ತಿಯ ಗಜೇಂದ್ರಗಡ–ಸೊರಬ ರಾಜ್ಯ ಹೆದ್ದಾರಿ–136ರ ಸರಪಳಿ ಕಿ.ಮೀ 75.35ರಿಂದ 76.60ರವರೆಗೆ ಒಟ್ಟು 4.25 ಕಿ.ಮೀ ರಸ್ತೆಯು ಇತ್ತೀಚಿನ ಮಳೆಯಿಂದ ಹಾಗೂ ರಸ್ತೆ ಬದಿಯ ಕೆರೆಯಿಂದ ತೆಗೆದ ಹೂಳು ರಸ್ತೆಯನ್ನು ಆವರಿಸಿದ್ದರಿಂದ, ಹಾಳಾಗಿದೆ.

ರಸ್ತೆಗೆ ಮುರಂ ಕೋರಿಂಗ್ ಅಳವಡಿಸಿ ಹಾಗೂ ಕಿ.ಮೀ 76.18ರಲ್ಲಿ ಭಾಗಶಃ ರಿಟೈನಿಂಗ್‌ವಾಲ್ ನಿರ್ಮಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ವಾರ್ಷಿಕ ನಿರ್ವಹಣೆಯನ್ನು ಸಹ ಮಾಡಲಾಗುತ್ತಿದೆ.

ಇ) ಈ ರಸ್ತೆ ಸುಧಾರಣೆ ಕಾಮಗಾರಿಯನ್ನು 2009–10ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಕೈಗೆತ್ತಿಕೊಳ್ಳಲಾಗುವುದು.

**1070 Sri Shankara Patila Munnenakoppa** : Hon'ble Minister for Public Works kindly answer to the below question?

a) Totally 4.250 km long road from km 7.350 to 79.600 of State Highway-136 in Navalagunda taluk of Dharwad district having been damaged, what are the actions taken by the Government to development this road;

b) Whether it has come to the notice of Government that this road has been damaged causing inconvenience for traffic;